3. ಪ್ರಕಟಣೆ

ಸದನದ ಕಾರ್ಯಕಲಾಪಗಳು

ಅಧ್ಯಕ್ಷರು :- ದಿನಾಂಕ 27ನೇ ಫೆಬ್ರವರಿ 2003ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳು ಸಲಹಾ ಸಮಿತಿಯ ಸಭೆಯಲ್ಲಿ ವಿಧಾನ ಸಭೆಯ ಕಾರ್ಯಕಲಾಪಗಳನ್ನು ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 3ನೇ ಮಾರ್ಚ್ 2003 ರಿಂದ 13ನೇ ಮಾರ್ಚ್, 2003ರ ವರೆಗೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಹಾಗೂ ಸರ್ಕಾರಿ ಕಾರ್ಯಕಲಾಪಗಳು.
2. ದಿನಾಂಕ 17ನೇ ಮಾರ್ಚ್ 2003ರಂದು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ.
3. ಪ್ರತಿದಿನ ಮಧ್ಯಾಹ್ನ 1-30 ರಿಂದ 2-30ರ ವರೆಗೆ ಊಟದ ವಿರಾಮ.
4. ಪ್ರತಿದಿನ ವಿರಾಮದ ನಂತರ ಒಂದು ಅಥವಾ ಎರಡು ವಿಧೇಯಕಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು.
5. ದಿನಾಂಕ 29ನೇ ಮಾರ್ಚ್ 2003ರ ಶನಿವಾರದಂದು ಉಪವೇಶನ ನಡೆಯಲಿದೆ. ಸಾಮಾನ್ಯವಾಗಿ ಶನಿವಾರ ದಿವಸ ಉಪವೇಶನ ಇರುವುದಿಲ್ಲ. ಆದ್ದರಿಂದ ಮೊದಲೇ ಇವತ್ತು ತಮಗೆ ತಿಳಿಸಿದರೆ ನಿಮಗೆಲ್ಲ ಅನುಕೂಲವಾಗುತ್ತದೆ ಮತ್ತು ತಾವೆಲ್ಲರೂ ತಮ್ಮ ಕಾರ್ಯಕ್ರಮಗಳನ್ನು ಹೊಂದಾಣಿಕೆ ಮಾಡಿಕೊಳ್ಳಲಿಕ್ಕೆ ಸಹಾಯಕವಾಗಲಿ ಎಂದು ಮೊದಲೇ ತಿಳಿಸುತ್ತಿದ್ದೇನೆ.
6. ದಿನಾಂಕ 18ನೇ ಮಾರ್ಚ್, 2003ರಂದು 31ನೇ ಮಾರ್ಚ್ 2003ರವರೆಗೆ ಸರ್ಕಾರಿ ಕಾರ್ಯಕಲಾಪಗಳು. ಅದರಲ್ಲಿ ಬಜೆಟ್ ಬರಬಹುದು. ಅದನ್ನು ಮಂಡನೆ ಮಾಡುವ ದಿನಾಂಕವನ್ನು ಸರ್ಕಾರದವರು ಇನ್ನೂ ತಿಳಿಸಿಲ್ಲ.
7. ಸದನದ ಕಾರ್ಯಕಲಾಪಗಳನ್ನು ಪ್ರತಿದಿನ ಸಾಯಂಕಾಲ 6-00 ಗಂಟೆಯವರೆಗೆ ನಡೆಸಲಾಗುವುದು.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ.

4. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :-

ವಿಷಯ:- ರಾಜ್ಯದಲ್ಲಿನ ಬರಗಾಲದ ಪರಿಸ್ಥಿತಿ ಕುರಿತು.

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಿಲುವಳಿ ಸೂಚನೆಯನ್ನು ನಾವು ಕಳುಹಿಸಿದ್ದೇವೆ. ಇಡೀ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಬರಗಾಲ ಪರಿಸ್ಥಿತಿ ಇದ್ದು....

ಅಧ್ಯಕ್ಷರು :- ಶೆಟ್ಟರ್‌ರವರೇ, ನಾವು ಬ್ಯಾಡ್ ಪ್ರಿಸಿಡೆಂಟ್‌ನ್ನು ನಿರ್ಮಾಣ ಮಾಡುವುದು ಬೇಡ. ಪ್ರಶ್ನೋತ್ತರ ವೇಳೆ ಮುಗಿದುಹೋಗಲಿ. ನಂತರ ನಾನು ಖಂಡಿತವಾಗಿ ನಿಮಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.